**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ “ಕೇರಳ ಗಡಿಗೆ ತಾಗಿಕೊಂಡಿರುವ ಮೈಸೂರಿನ ಎಚ್.ಡಿ.ಕೋಟೆ ತಾಲ್ಲೂಕಿನ ಬಾವಲಿ, ಕಡೆಗದ್ದೆ ತಿಮ್ಮನಹೊಸಹಳ್ಳಿ. ಡಿ.ಬಿ. ಕುಪ್ಪೆ, ಮಾನಿಮೂಲೆ, ಗೂಳೂರು, ಮಚೂರು ವಡಕನಮಾಳ, ಅನೆಮಾಳ ಸೇರಿದಂತೆ ವಿವಿಧ ಹಾಡಿಗಳ ನಿವಾಸಿಗರು ಮದ್ಯದಂಗಡಿಗಳನ್ನು ಮುಚ್ಚಿಸುವಂತೆ ದಶಕದಿಂದ ಹೋರಾಟ ಮಾಡುತ್ತಿದ್ದರೂ, ಕಾಡಿನ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮಧ್ಯ ಮಾರಾಟದ ಕಾರಣ ಹಾಗೂ ಕೇರಳದಿಂದ ಬರುವ ಪ್ರವಾಸಿಗರಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಗಮನ ಸೆಳೆಯುವ ಸೂಚನೆಗೆ ಸನ್ಮಾನ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*******

**ಅರಣ್ಯ ಇಲಾಖೆ:-**

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕಿನ ಬಾವಲಿ, ಕಡೆಗದ್ದೆ, ತಿಮ್ಮನಹೊಸಹಳ್ಳಿ ಡಿ.ಬಿ. ಕುಪ್ಪೆ ಮಾನಿಮೂಲೆ, ಗೂಳೂರು, ಮಚ್ಚೂರು, ವಡಕನಮಾಳ, ಅನಮಾಳ ಸೇರಿದಂತೆ ವಿವಿಧ ಹಾಡಿಗಳು ಇರುವ ಸ್ಥಳಗಳು, ಅಧಿಸೂಚನೆ ಸಂಖ್ಯೆ: FEE 299 FWL 2007, ದಿನಾಂಕ: 20.12.2007 ರಂತೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಸ, ಡಿ.ಬಿ.ಕುಪ್ಪೆ ವನ್ಯಜೀವಿ ವಲಯ ವ್ಯಾಪ್ತಿಯ ಕೋರ್ ಅರಣ್ಯವಾದ ಕಾಕನಕೋಟೆ ಮೀಸಲು ಅರಣ್ಯ ಪ್ರದೇಶದೊಳಗಿನ ರೆವಿನ್ಯೂ ಎನ್ಕ್ಲೋಸರ್ (ಕಂದಾಯ ಗ್ರಾಮದ) ಜಾಗವಾಗಿರುತ್ತದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವನ್ನು "ಪರಿಸರ ಸೂಕ್ಷ್ಮ ವಲಯ"ವೆಂದು ಘೋಷಿಸುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಶೀಲನೆಯಲ್ಲಿದ್ದು, ರಾಷ್ಟ್ರೀಯ ಉದ್ಯಾನವನ/ವನ್ಯಜೀವಿ ಧಾಮದ ಗಡಿಯಿಂದ 10 ಕಿ.ಮೀ ವರೆಗಿನ ಪ್ರದೇಶವು ಪರಿಭಾವಿತ ಪರಿಸರ ಸೂಕ್ಷ್ಮ ವಲಯವಾಗಿರುತ್ತದೆ. ಸದರಿ ಪರಿಭಾವಿತ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯಲ್ಲಿ ಇಂತಹ ಚಟುವಟಿಕೆಗಳಿಗೆ ಯಾವುದೇ ನಿರ್ಭಂದ ಇರುವುದಿಲ್ಲ.

ಮುಂದುವರೆದು, ಆರ್ಥಿಕ ಇಲಾಖೆ (ಅಬಕಾರಿ)ಯಿಂದ ಮದ್ಯ ಕೇಂದ್ರಗಳಿಗೆ ಪರವಾನಗಿ ಪಡೆದು ನೀಡಲಾಗುತ್ತಿದ್ದು ಅಬಕಾರಿ ಇಲಾಖೆಯಿಂದ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಪಡೆದಿದ್ದು ಅನುಬಂಧದಲ್ಲಿ ಒದಗಿಸಿದೆ.

**ಇ-ಸಂಖ್ಯೆ: ಅಪಜೀ 78 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

**ಶ್ರೀ ಸಿ.ಎನ್.ಮಂಜೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ನಿಯಮ 330ರ ಗಮನ ಸೆಳೆಯುವ ಸೂಚನಾ ಸಂಖ್ಯೆ: 74 ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.**

*********

**ಪ್ರಶ್ನೆ:-**

ಕೇರಳ ಗಡಿಗೆ ತಾಗಿಕೊಂಡಿರುವ ಮೈಸೂರಿನ ಹೆಚ್.ಡಿ ಕೋಟೆ ತಾಲ್ಲೂಕಿನ ಬಾವಲಿ, ಕಡೆಗದ್ದೆ, ತಿಮ್ಮನಹೊಸಹಳ್ಳಿ, ಡಿ.ಬಿ.ಕುಪ್ಪೆ, ಮಾನಿಮೂಲೆ, ಗೂಳೂರು ಮಚ್ಚೂರು, ವಡಕನಮಾಳ, ಆನೆಮಾಳ ಸೇರಿದಂತೆ, ವಿವಿಧ ಹಾಡಿಗಳ ನಿವಾಸಿಗರು ಮದ್ಯದಂಗಡಿಗಳನ್ನು ಮುಚ್ಚಿಸುವಂತೆ ದಶಕದಿಂದ ಹೋರಾಟ ಮಾಡುತ್ತಿದ್ದರೂ , ಕಾಡಿನ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮದ್ಯ ಮಾರಾಟದ ಕಾರಣ ಹಾಗೂ ಕೇರಳದಿಂದ ಬರುವ ಪ್ರವಾಸಿಗರಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು .

**ಉತ್ತರ:-**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ರವರ ಸೂಚನಾ ಸಂಖ್ಯೆ : 74ಕ್ಕೆ ಸಂಬಂಧಿಸಿದಂತೆ ಮೈಸೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕು, ಕೇರಳಾ ರಾಜ್ಯದ ಗಡಿಭಾಗವಾಗಿರುತ್ತದೆ. ಅದರಂತೆ ಸದರಿ ತಾಲ್ಲೂಕಿನಲ್ಲಿ ಬಾವಲಿ, ಕಡೆಗದ್ದೆ, ತಿಮ್ಮನಹೊಸಳ್ಳಿ, ಡಿ.ಬಿ.ಕುಪ್ಪೆ, ಮಾನಿಮೂಲೆ, ಗೋಳೂರು, ಮಚೂರು, ವಡಕನಮಾಳ, ಆನೆಮಾಳ ಎಂಬಂತೆ ವಿವಿಧ ಹಾಡಿಗಳು ಒಳಪಟ್ಟಿದ್ದು, ಅದರಂತೆ ಸದರಿ ಕೆಲವು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಈ ಕೆಳಕಂಡಂತಿರುವ ಮದ್ಯದ ಸನ್ನದುಗಳು ಪ್ರಸ್ತುತ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

| ಕ್ರ. ಸಂ | ಸನ್ನದುದಾರರ ಹೆಸರು ಮತ್ತು ವಿಳಾಸ | ಸನ್ನದಿನ ವಿಧ | ಕೆ.ಎ.ಟಿ.ನ್ಯಾಯಾಲಯದ ಅಪೀಲು ಸಂಖ್ಯೆ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|
| 1 | ಶ್ರೀ ಎನ್.ವಿ. ಕೃಷ್ಣಪ್ಪ, ಜೆ.ಕೆ. ಬಾರ್, ಸಂಖ್ಯೆ : 48, ಡಿ.ಬಿ. ಕುಪ್ಪೆ ಗ್ರಾಮ ಪಂಚಾಯಿತಿ, ಅಂತರಸಂತೆ ಹೋಬಳಿ, ಹೆಚ್.ಡಿ.ಕೋಟೆ ತಾ | ಸಿಎಲ್-9 | 29/2023 (ಆರ್.ಇ.ವಿ. ಎಪಿಎಲ್) ಆದೇಶ ದಿ: 01-02-23 | ವಿಚಾರಣಾ ಹಂತದಲ್ಲಿರುತ್ತದೆ |
| 2 | ಬಾಲಾಜಿ ಪೋತರಾಜು, ಬಾಬಾ ಬಾರ್, ಸಂ. 54, ತಿಮ್ಮನಹೊಸಳ್ಳಿ ಗ್ರಾಮ, ಡಿ.ಬಿ.ಕುಪ್ಪೆ, ಗ್ರಾಮ ಪಂಚಾಯಿತಿ, ಹೆಚ್.ಡಿ.ಕೋಟೆ ತಾ | ಸಿಎಲ್-9 | 31/2023, (ಆರ್.ಇ.ವಿ. ಎಪಿಎಲ್) ಆದೇಶ ದಿ: 01-02-23 | ವಿಚಾರಣಾ ಹಂತದಲ್ಲಿರುತ್ತದೆ |
| 3 | ಕೆ.ಎನ್. ರಘುರಾಂ, ಸಂ: 60/55, ಗೋಳೂರು ಗ್ರಾಮ, ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ, ಹೆಚ್.ಡಿ.ಕೋಟೆ ತಾ. | ಸಿಎಲ್-2 | 228/2024, (ಆರ್.ಇ.ವಿ. ಎಪಿಎಲ್) ಆದೇಶ ದಿ: 27-03-24 | ವಿಚಾರಣಾ ಹಂತದಲ್ಲಿರುತ್ತದೆ |
| 4 | ಪಾಲುದಾರರು, ಮೆ: ಕೆ.ಎಸ್. ರೆಸಾರ್ಟ್ ಸರ್ವೆ ಸಂ. 23 ಮತ್ತು 24, ಜೆ.ನಂ. 18, ಕಡೆಗದ್ದೆ ಗ್ರಾಮ, ಡಿ.ಬಿ. ಕುಪ್ಪೆ ಅಂಚೆ, ಅಂತರಸಂತೆ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು. | ಸಿಎಲ್-7 | - | - |

ಪಾಲುದಾರರು, ಮ: ಕೆ.ಎಸ್. ರೆಸಾರ್ಟ್ ಸರ್ವೆ ಸಂ. 23 ಮತ್ತು 24, ಜಿ.ನಂ. 18, ಕಡೆಗದ್ದೆ ಗ್ರಾಮ, ಡಿ.ಬಿ. ಕುಪ್ಪೆ ಅಂಚೆ, ಅಂತರಸಂತೆ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು ಇವರು 2013-14ನೇ ಸಾಲಿನಲ್ಲಿ ಹೊಂದಿದ್ದ ಸಿಎಲ್-7 ಸನ್ನದನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು ಇವರು ಈ ಹಿಂದೆ ಸದರಿ ಸನ್ನದನ್ನು ನವೀಕರಿಸಬಾರದೆಂದು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರ ನಡವಳಿ ಆದೇಶ ಸಂಖ್ಯೆ : ಇಎಕ್ಸ್ ಇ/ಎಂವೈಎಸ್/ಸಿಎಲ್-7/ಹೆಚ್ ಡಿಕೆ/25/2014-15, ದಿನಾಂಕ: 19-12-2014ರಲ್ಲಿ, ಸದರಿ ಸಿಎಲ್-7 ಸನ್ನದನ್ನು ರದ್ದುಪಡಿಸಿ ಆದೇಶಿಸಲಾಗಿದ್ದ ಹಿನ್ನಲೆಯಲ್ಲಿ, ಸುಮಾರು 8-9 ವರ್ಷಗಳು ಸದರಿ ಸನ್ನದು ನವೀಕರಣಗೊಳ್ಳದೇ ಸ್ಥಗಿತಗೊಂಡಿತ್ತು.

ತದನಂತರದಲ್ಲಿ ಮೇಲ್ಕಾಣಿಸಿದ ಅರಣ್ಯಾಧಿಕಾರಿಗಳ ಪತ್ರ ಸಂಖ್ಯೆ : ಬಿ4/ಎಲ್ಎನ್‌ಡಿ ರೆಸ್ಟೋರೆಂಟ್ / ಜಿಎಲ್-5267/2018-19, ದಿನಾಂಕ: 23-11-2023 ಮತ್ತು 28-11-2023 ರಲ್ಲಿ ಸದರಿ ಸಿಎಲ್-7 ಸನ್ನದನ್ನು ನವೀಕರಿಸಲು ಅಭ್ಯಂತರವಿರುವುದಿಲ್ಲ, ನಿಯಮಾನುಸಾರ ಕ್ರಮ ಕೈಗೊಳ್ಳಬಹುದಾಗಿರುತ್ತದೆಂದು ತಿಳಿಸಿದರನ್ವಯ ಅಬಕಾರಿ ನಿಯಮಗಳನ್ವಯ ಮೇಲ್ಕಾಣಿಸಿದ ಸಿಎಲ್-7 ಸನ್ನದನ್ನು 2022-23ನೇ ಸಾಲಿಗೆ ನವೀಕರಿಸಲಾಗಿದ್ದು, ಅದರಂತೆ ಪ್ರಸ್ತುತದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

ಬಳಿಕ ಸದರಿ ಅರಣ್ಯಾಧಿಕಾರಿಯು ದಿನಾಂಕ : 03-07-2024 ರಲ್ಲಿ ಸದರಿ ಮ: ಕೆ.ಎಸ್. ರೆಸಾರ್ಟ್ ಮತ್ತು ಮಚ್ಚೂರು ಗ್ರಾಮದ ರಾಘವೇಂದ್ರ ವೈನ್ಸ್, ಸಿಎಲ್-2 ಮತ್ತು ಡಿ.ಬಿ. ಕುಪ್ಪೆ ಗ್ರಾಮದಲ್ಲಿರುವ ಜಿ.ಕೆ. ಬಾರ್, ತಿಮ್ಮನಹೊಸಳ್ಳಿ ಗ್ರಾಮದಲ್ಲಿರುವ ಬಾಬಾ ಬಾರ್ ಎಂಬ ಸಿಎಲ್-9 ಸನ್ನದುಗಳನ್ನು ಕೂಡಲೇ ರದ್ದುಪಡಿಸಲು ನಿಯಮಾನುಸಾರ ಕ್ರಮವಹಿಸಲು ಸೂಚಿಸಿರುತ್ತಾರೆ.

ಮೇಲೆ ಪ್ರಸ್ತಾಪಿಸಿದಂತೆ ದಿನಾಂಕ: 23-11-2023 ಮತ್ತು 28-11-2023ರಲ್ಲಿ ಕಡೆಗದ್ದೆ ಗ್ರಾಮದಲ್ಲಿರುವ ಸದರಿ ಸಿಎಲ್-7 ಸನ್ನದನ್ನು ನವೀಕರಿಸಲು ಅಭ್ಯಂತರವಿರುವುದಿಲ್ಲವೆಂದು ತಿಳಿಸಿ, ತದನಂತರ ದಿನಾಂಕ : 03-07-2024 ರ ಪತ್ರದಲ್ಲಿ ಮೇಲ್ಕಂಡ ಸನ್ನದುಗಳನ್ನು ರದ್ದುಪಡಿಸಲು ಸಲ್ಲಿಸಿರುವ ವರದಿಯ ಅಂಶಗಳ ಹಿನ್ನಲೆಯಲ್ಲಿ ಸನ್ನದಿನ ಬಗ್ಗೆ ಅಬಕಾರಿ ನಿಯಮಾನುಸಾರ ಕ್ರಮ ಅನುಸರಿಸಿ ನಿರ್ಣಯಿಸುವ ವಿಷಯವು ದ್ವಂದ್ವವಾಗಿರುತ್ತದೆ. ಆದ್ದರಿಂದ ಮತ್ತೊಮ್ಮೆ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ನೈಜ ಅಂಶಗಳು / ವಾಸ್ತವಿಕ ಘಟನಾವಳಿಗಳ ಕುರಿತಂತೆ ಸ್ಪಷ್ಟ ನಿಲುವಿನೊಂದಿಗೆ ಪೂರಕ ದಾಖಲಾತಿಗಳೊಂದಿಗೆ ವಿಸ್ತೃತ ವರದಿ ನೀಡಲು ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರು ದಿ:23.07.2024 ರ ಪತ್ರದಂತೆ ಅರಣ್ಯ ಅಧಿಕಾರಿಗಳಿಗೆ ಪತ್ರ ವ್ಯವಹರಿಸಲಾಗಿರುತ್ತದೆ. ಆದರೆ ಸದರಿಯವರಿಂದ ಇದೂವರೆವಿಗೂ ಯಾವುದೇ ವರದಿಗಳು ಸ್ವೀಕೃತವಾಗಿರುವುದಿಲ್ಲ.

ಮೈಸೂರು ಗ್ರಾಮಾಂತರ ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಕೇರಳಾ ರಾಜ್ಯದ ಗಡಿಭಾಗವಾದ ಬಾವಲಿ, ಕಡೆಗದ್ದೆ, ತಿಮ್ಮನಹೊಸಹಳ್ಳಿ, ಡಿ.ಬಿ. ಕುಪ್ಪೆ ಆನೆಮಾಳದಲ್ಲಿರುವ ಹಾಡಿಗಳಲ್ಲಿ, ಯಾವುದೇ ಅಬಕಾರಿ ಅಕ್ರಮ ಚಟುವಟಿಕೆಗಳು ಜರುಗದಂತೆ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿರುತ್ತದೆ. ಕೇರಳಾ ರಾಜ್ಯದ ಜನರು ಅವರ ದೈನಂದಿನ ವ್ಯವಹಾರಗಳಿಗಾಗಿ ಮತ್ತು ಪ್ರವಾಸಿಗರು ಭೇಟಿ ನೀಡುವುದು ಸಾಮಾನ್ಯವಾಗಿರುತ್ತದೆ. ಕೇರಳಾ ಅಬಕಾರಿ ಮತ್ತು ಜಿಲ್ಲಾ ಅಬಕಾರಿ ಇಲಾಖೆಯು ಸಮನ್ವಯ ಸಾಧಿಸಿ ಜಂಟಿಯಾಗಿ ಕಡೆಗದ್ದೆ ಗ್ರಾಮದಲ್ಲಿ ದಾಳಿ ನಡೆಸಿ, 15.920 ಕೆ.ಜಿ. ಹಸಿ ಗಾಂಜಾವನ್ನು (25 ಗಿಡಗಳು) ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಿ ಎನ್.ಡಿ.ಪಿ.ಎಸ್. ಕಾಯ್ದೆಯಡಿಯಲ್ಲಿ ಅನಿ. ಹೆಚ್.ಡಿ.ಕೋಟೆ ವಲಯ ಇವರು ಪ್ರ.ಮಾ.ವ ಸಂ:32/2023-24,

ದಿ:19-02-2024ರಂತೆ ಮೊಕದ್ದಮೆಯನ್ನು ದಾಖಲಿಸಲಾಗಿದ್ದು, ನ್ಯಾಯಾಲಯಕ್ಕೆ ಅಂತಿಮ ಆರೋಪ ಪಟ್ಟಿ ಸಲ್ಲಿಸಲಾಗಿದೆ.

ಅಲ್ಲದೇ ರಾಜ್ಯದ ಗಡಿಭಾಗವಾದ ವಡಕನಮಾಳ ಗ್ರಾಮದಲ್ಲಿ ಅಬಕಾರಿ ದಾಳಿ ನಡೆಸಿ 4 ಕೆ.ಜಿ. ಒಣ ಗಾಂಜಾವನ್ನು ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಿ ಎನ್.ಡಿ.ಪಿ.ಎಸ್. ಕಾಯ್ದೆಯಡಿಯಲ್ಲಿ ಅನಿ, ಹೆಚ್.ಡಿ.ಕೋಟೆ ವಲಯ ಇವರು ಪ್ರವ.ವ ಸಂ:119/2023-24, ದಿನಾಂಕ: 07-05-2024ರಂತೆ ಮೊಕದ್ದಮೆಯನ್ನು ದಾಖಲಿಸಲಾಗಿದ್ದು, ನ್ಯಾಯಾಲಯಕ್ಕೆ ಅಂತಿಮ ಆರೋಪ ಪಟ್ಟಿಯನ್ನು ಸಲ್ಲಿಸಿದ್ದು, ಸಿ.ಸಿ. ಸಂಖ್ಯೆ : 63/2025 ಆಗಿರುತ್ತದೆ. ಆದಾಗ್ಯೂ ಅಬಕಾರಿ ಕೈಪಿಡಿ ಅನುಸಾರ ನಿರಂತರ ಗಸ್ತು, ರಸ್ತೆ ಕಾವಲು, ಶಂಕಿತ ವಾಹನಗಳ ತಪಾಸಣೆಯಂತೆ ಮತ್ತು ಹಳೇ ಆರೋಪಿಗಳ ಚಲನ-ವಲನಗಳ ಬಗ್ಗೆ ನಿಗಾ ವಹಿಸುವುದು ಹಾಗೂ ಇನ್ನಿತರೆ ಜಾರಿ & ತನಿಖಾ ಚಟುವಟಿಕೆಗಳನ್ನು ಜರುಗಿಸಲಾಗುತ್ತಿರುತ್ತದೆ.

ಮೇಲೆ ವಿವರಿಸಿದಂತೆ ಸದರಿ ಸಿಎಲ್-7 ಸನ್ನದು ಹೊರತುಪಡಿಸಿ, ಉಳಿದ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳ ಸ್ಥಳಾಂತರದ ಕುರಿತಂತೆ ಮಾನ್ಯ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬೆಂಗಳೂರು ಇಲ್ಲಿ ಮೇಲ್ಮನವಿ ಹೂಡಿದ್ದು, ವಿಚಾರಣಾ ಹಂತದಲ್ಲಿರುತ್ತದೆ.

ಅಬಕಾರಿ ಆಯುಕ್ತರು